ದಿಃ **09-02-2023** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರವರಿಂದಃ

ಕೊಟ್ರಮ್ಮ ನನ್ನ ಹೆಣ್ಣಜ್ಜಿ ಆಗಬೇಕು. ಆಕೆಯ ಗಂಡನ ಹೆಸರು ಸಿದ್ಧಪ್ಪ. ಕೊಟ್ರಮ್ಮ ಇವರು ಮೂಲತಹ ಮುಂಡರಗಿಯವರು. ಕೊಟ್ರಮ್ಮ ಮತ್ತು ಸಿದ್ಧಪ್ಪ ಇವರು ಮುಂಡರಗಿಯಲ್ಲಿ ಬಟ್ಟೆ ವ್ಯಾಪಾರ ಮಾಡುತ್ತಿದ್ದರೆ ಎಂದರೆ ಕಡ್ಡಿಪುಡಿ ಮತ್ತು ತಂಬಾಕು ವ್ಯಾಪಾರ ಮಾಡುತ್ತಿದ್ದರು. ಅದನ್ನು **1957** ರಿಂದ **60** ನೇ ಇಸ್ವೀಯಲ್ಲಿ ಮಾಡುತ್ತಿದ್ದರು ಎಂದರೆ ಸರಿ . ಆ ಸಮಯದಲ್ಲಿ ವ್ಯಾಪಾರದಲ್ಲಿ ನಷ್ಟ ಆಗಿದ್ದರಿಂದ ಸಿದ್ಧಪ್ಪ ಇತನು ತನ್ನ ಹೆಂಡತಿಯೊಂದಿಗೆ ಹಿರೇ ಹಡಗಲಿಯಲ್ಲಿ ಬಂದು ನೆಲೆಸಿರುತ್ತಾನೆ. ಹಿರೇ ಹಡಗಲಿಗೆ ಬಂದು **4-5** ವರ್ಷದಲ್ಲಿ ತೀರಿಕೊಂಡಿರುತ್ತಾನೆ. ಕೊಟ್ರಮ್ಮ ಇಕೆ ಮುಂಡರಗಿಯಲ್ಲಿ ಇದ್ದ ಎಲ್ಲಾ ಆಸ್ತಿಯನ್ನು ಮಾರಿಕೊಂಡು ಹಿರೇ ಹಡಗಲಿಯಲ್ಲಿ ದಾವಾ ಸ್ವತ್ತನ್ನು ಖರೀದಿಸಿರುತ್ತಾರೆ ಎಂದರೆ ಕೊಟ್ರಮ್ಮ ಇಕೆ ಮುಂಡರಗಿಯಲ್ಲಿ ಯಾವುದೇ ಆಸ್ತಿಯನ್ನು ಮಾರಾಟ ಮಾಡಿರುವುದಿಲ್ಲ.

**2.** ದಾವಾ ಸ್ವತ್ತನ್ನು ಖರೀದಿಸುವಾಗ ಕೊಟ್ರಮ್ಮ ಈಕೆಗೆ ಎಷ್ಟು ವಯಸ್ಸು ಆಗಿತ್ತು ಎಂದರೆ ಗೊತ್ತಿಲ್ಲ. ದಾವಾ ಸ್ವತ್ತು ಕೊಟ್ರಮ್ಮ ಈಕೆಯ ಸ್ವಯಾರ್ಜಿತ ಆಸ್ತಿ ಇರುವುದಿಲ್ಲ ಮತ್ತು ಗಂಡನ ಆಸ್ತಿಯಿಂದ ಖರೀದಿಸಿರುತ್ತಾರೆ ಎಂದರೆ ಸರಿ. ಆಕೆಯ ಸ್ವಂತ ದುಡಿಮೆಯಿಂದಲೂ ಸಹ ದಾವಾ ಸ್ವತ್ತನ್ನು ಖರೀದಿಸಿರುತ್ತಾರೆ.

**3.** ಕೊಟ್ರಮ್ಮ ಈಕೆ ದಿ.**05-11-1991** ರಲ್ಲಿ ತೀರಿಕೊಂಡಿರುತ್ತಾರೆ. ಕೊಟ್ರಮ್ಮ ಮತ್ತು ಸಿದ್ಧಪ್ಪ ಇವರಿಗೆ **3** ಜನ ಮಕ್ಕಳು. ಸದರಿಯವರು ಕಾಳವ್ವ, ನಾಗವ್ವ ಮತ್ತು ತಿಮ್ಮಪ್ಪ. ಸದರಿಯವರು ತೀರಿಕೊಂಡಿರುತ್ತಾರೆ. ಕಾಳವ್ವ ಈಕೆ ಚಿಕ್ಕವಳ್ಳಿದ್ದಾಗ ತೀರಿಕೊಂಡಿರುತ್ತಾಳೆ. ನಾಗವ್ವ ನನ್ನ ತಾಯಿ. ತಿಮ್ಮಪ್ಪ ಈತನು ಪ್ರತಿವಾದಿಯ ತಂದೆ ಎಂದರೆ ಸರಿ.

**4.** ನನ್ನ ತಾಯಿಯ ಮದುವೆ ಶಿರಹಟ್ಟಿ ತಾಲ್ಲೂಕಿನ ಹರಪೂರಿನ ಗ್ರಾಮದ ಈಶ್ವರಪ್ಪ ಇವರೊಂದಿಗೆ ಆಗಿರುತ್ತದೆ. ನಾವು ಒಟ್ಟು **7** ಜನ ಮಕ್ಕಳು. ಅದರಲ್ಲಿ ಒಬ್ಬರು ತೀರಿಕೊಂಡಿರುತ್ತಾರೆ. ವಾದಿ ನಂ. **3** ದಾವೆ ನಂತರ ತೀರಿಕೊಂಡಿರುತ್ತಾರೆ.

ನನ್ನ ತಂದೆ ಇನ್ನು ಬದುಕಿದ್ದಾರೆ. ನನ್ನ ತಂದೆ ಕೆ.ಪಿ.ಟಿ.ಸಿ.ಎಲ್. ನಲ್ಲಿ ಸಹಾಯಕ ಇಂಜೀನಿಯರಾಗಿ ಕೆಲಸ ಮಾಡುತ್ತಿದ್ದರು. ಹರಿಪುರ ಗ್ರಾಮದಲ್ಲಿ ನಮ್ಮ ಮನೆ ಮತ್ತು ಜಮೀನು ಇರುತ್ತವೆ. ನನ್ನ ತಂದೆಗೆ **5** ಎಕರೆ ಜಮೀನು ಮತ್ತು **2** ಮನೆಗಳು ಇರುತ್ತವೆ.

**5.** ನಮ್ಮದು ಹರಿಪೂರದಲ್ಲಿ ದೊಡ್ಡ ಕೂಡಿ ಕುಟುಂಬ ಎಂದರೆ ಸರಿ. ಹಿರೇ ಹಡಗಲಿಯಿಂದ ಹರಿಪೂರ ಗ್ರಾಮ ಸುಮಾರು **150** ಕಿಲೋ ಮೀಟರ್ ದೂರದಲ್ಲಿ ಇರುತ್ತದೆ. ಹೋಗಿ ಮತ್ತು ಬರಲು ಒಂದು ದಿನ ತಗಲುತ್ತದೆ ಎಂದರೆ ಸರಿ. ಮದುವೆ ನಂತರ ನನ್ನ ತಾಯಿ ಹಿರೇ ಹಡಗಲಿಗೆ ಹೋಗಿ ಬಂದು ಮಾಡುತ್ತಿದ್ದರು ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ

"ನನ್ನ ಸಮಕ್ಷಮ"

(ಶ್ರೀ.ವೀರೇಶ್ ಕುಮಾರ್.ಸಿ.ಕೆ.)
ದಿವಾಣಿ ನ್ಯಾಯಾಧೀಶರು,
ಹಡಗಲಿ